***MVC No. 661/2024***
***PW:01***

**ಅರ್ಜಿಯ ಮೇರೆಗೆ ಸಾಕ್ಷಿಯನ್ನು ದಿಃ *25/03/2026* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು ಃ ಶ್ರೀ ಎಸಎಲಎಂ ವಕೀಲರಿಂದ 1 ನೇ ಎದುರುದಾರರ ಪರವಾಗಿ.**

ದೂರನ್ನು ನನ್ನ ಪತಿ ನೀಡಿರುತ್ತಾರೆ. ಅಪಘಾತವಾದಾಗ ನನ್ನ ಪತಿ ಘಟನಾ ಸ್ಥಳದಲ್ಲಿದ್ದರು. ಈ ರೀತಿ ಇದ್ದರೂ ಸಹ ಅಪಘಾತದ ವಾಹನಗಳ ಕುರಿತು ದೂರಿನಲ್ಲಿ ಬರೆದಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿದಾರರು ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ ಹಿಡಿಯಲಾಗಿದೆ ಎಂದು ಉತ್ತರಿಸುತ್ತಾರೆ. ನನ್ನ ಪತಿ ಅಪಘಾತ ಸ್ಥಳದಲ್ಲಿ ಇಲ್ಲದೇಯಿದ್ದರೂ ಸಹ ಇದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದೂರಿನಲ್ಲಿ 1 ನೇ ಎದುರುದಾರರ ಹೆಸರು ಬರೆಸಿಲ್ಲ ಎಂದರೆ ಸರಿಯಲ್ಲ. ಅಪಘಾತವು ನನ್ನ ತಪ್ಪಿನಿಂದ ಆಗಿದೆ ಹೊರತು 1 ನೇ ಎದುರುದಾರರದು ಯಾವುದೇ ರೀತಿ ತಪ್ಪು ಇರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ನನ್ನ ಪತಿ ಅಲ್ಲಿ ಪ್ರಸ್ತುತವಿರಲಿಲ್ಲ ಎಂದು ಬರೆಯಲಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿದಾರರು ಕೂಡಲೇ ಘಟನಾ ಸ್ಥಳಕ್ಕೆ ಬಂದರು ಎಂದು ಉತ್ತರಿಸುತ್ತಾರೆ.

ನನಗೆ ಸದರಿ ಅಪಘಾತದಲ್ಲಿ ಸಾದಾ ಸ್ವರೂಪದ ಗಾಯಗಳು ಆಗಿವೆ ಎಂದರೆ ಸರಿಯಲ್ಲ. ಪೊಲೀಸರೊಂದಿಗೆ ಮಿಲಾಪಿಯಾಗಿ 1 ನೇ ಎದುರುದಾರರ ವಿರುದ್ದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ಅಪಘಾತದ ಸಮಯದಂದು 1 ನೇ ಎದುರುದಾರರ ವಾಹನದ ಚಾಲಕನಾದ ರಮೇಶ ನಿಪ್ಪಾಣಿ ಇವರು ಮೋಟಾರುಸೈಕಲ ಚಲಾಯಿಸುತ್ತಿರಲಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಅಪಘಾತಕ್ಕೆ 1 ನೇ ಎದುರುದಾರರು ಕಾರಣರಲ್ಲ, ಸದರಿಯವರು ಯಾವುದೇ ಪರಿಹಾರ ಹಣ ಕೊಡಲು ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

***ಮರು ವಿಚಾರಣೆ ಃ ಇಲ್ಲ.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ,

1 ನೇ ಹೆ ಹಿ ದಿ ನ್ಯಾ ಹಾಗೂ ಸಿಜೆಎಂ,
ಧಾರವಾಡ.